
# ದಿವ್ಯಾನುಭೂತಿಯ ದೇವರ ದಿಬ್ಬ



**ಐದು ದಿನಗಳ ಕಠಿಣ ಚಾರಣ ಮಾಡಿ 'ದೇವರ ದಿಬ್ಬ'ದ ಪದತಲದಲ್ಲಿ ನಿಂತಾಗ, ಉಗ್ರ ತಪಸ್ಸು ಮಾಡಿ ದೇವರ ದರ್ಶನ ಪಡೆದಂಥ ಭಾವ ಆವರಿಸುತ್ತದೆ. ಪ್ರಕೃತಿಪ್ರಿಯರಿಗೆ, ಅಧ್ಯಾತ್ಮದ ಅನ್ವೇಷಕರಿಗೆ, ಚಾರಣಿಗರಿಗೆ, ಪ್ರತಿಯೊಬ್ಬರಿಗೂ ಒಂದೊಂದು ಬಗೆಯ ಅನುಭವವನ್ನು ಮೊಗೆಮೊಗೆದು ಕೊಡುತ್ತದೆ ಹಿಮಾಲಯದ 'ದಿಯೋತಿಬ್ಬ'.**

■ **ಡಾ. ಟಿ. ಶ್ರೀನಿವಾಸ ರೆಡ್ಡಿ**

ದಟ್ಟ ಕಾಡು, ಹಚ್ಚಹಸುರಿನ ಹೊದಿಕೆಯ ಹುಲ್ಲುಗಾವಲುಗಳು, ನದಿ, ಕಣಿವೆ, ಹಳ್ಳ–ಕೊಳ್ಳ, ಎಲ್ಲಕ್ಕಿಂತ ಹೆಚ್ಚಾಗಿ ಹಿಮಾಚ್ಛಾದಿತ ಶಿಖರಗಳು. ಪ್ರಕೃತಿಪ್ರಿಯರಿಗೆ ಹಿಮಾಲಯ ಕಿನ್ನರಲೋಕ ಇದ್ದಂತೆ. ಪಾರಮಾರ್ಥದ ಹುಡುಕಾಟದಲ್ಲಿರುವವರಿಗೆ ದೇವಲೋಕ. ಚಾರಣಿಗರಿಗೆ ಹಿಮಾಲಯದ ಪರ್ವತಗಳು ಸ್ವರ್ಗ.

'ದಿಯೋತಿಬ್ಬ' ಚಾರಣಕ್ಕೆ ಹೋಗುವ ಬಗ್ಗೆ ಗೆಳೆಯ ಹೇಳಿದಾಗ ಚಾರಣದ ಬಗ್ಗೆ ಯಾವುದೇ ಅನುಭವದ ಮಾತಿರಲಿ, 'ದಿಯೋತಿಬ್ಬ' ಎಲ್ಲಿದೆ ಎಂದೂ ತಿಳಿಯದ ನಾನು ಹಿಂದೂಮುಂದು ನೋಡದೆ ಒಪ್ಪಿದ್ದೆ. ನಂತರ ಅಂತರ್ಜಾಲದ ಹುಡುಕಾಟದಿಂದ ಆ ಶಿಖರ ಹಿಮಾಲಯದಲ್ಲಿ ಮನಾಲಿ ಹತ್ತಿರ ಇದೆ ಎಂದು ತಿಳಿಯಿತು. ವಿಚಿತ್ರ ಹೆಸರಿನಿಂದಲೇ ಆಕರ್ಷಿಸಿದ 'ದಿಯೋತಿಬ್ಬ' ಸ್ಥಳೀಯರ ನಂಬಿಕೆಯಂತೆ ದೇವರುಗಳ ಆವಾಸಸ್ಥಾನ, ಆ ಕಾರಣದಿಂದಲೇ ಅದು 'ದೇವರ ದಿಬ್ಬ'.

7 ದಿನಗಳ ಚಾರಣವನ್ನೊಳಗೊಂಡ, ಒಟ್ಟು 10 ದಿನಗಳ ಈ ಪ್ರವಾಸವನ್ನು 'ಕರ್ನಾಟಕ ಮೌಂಟನೇರಿಂಗ್ ಅಕಾಡೆಮಿ' ಆಯೋಜಿಸಿತ್ತು. ಈ ಚಾರಣ ಒಟ್ಟು ಸುಮಾರು 80 ಕಿ.ಮೀ. ನಡಿಗೆ ಹಾಗೂ 3600 ಮೀಟರ್ ಎತ್ತರ ತಲುಪುವ ಗುರಿ ಹೊಂದಿದ್ದು, ತೀರಾ ಕಷ್ಟವೂ ಅಲ್ಲದ ತೀರಾ ಸುಲಭವೂ ಅಲ್ಲದ ಮಧ್ಯಮ ಮಟ್ಟದ ಚಾರಣವಾಗಿತ್ತು. ಈ ಶಿಖರದ ಎತ್ತರ ಸಮುದ್ರ ಮಟ್ಟದಿಂದ 6000 ಮೀಟರ್ ಇದ್ದರೂ ಶಿಖರದ ಕಾಲಡಿ ತಲುಪುವುದಷ್ಟೇ ನಮ್ಮ ಚಾರಣದ ಗುರಿಯಾಗಿತ್ತು.

ಅರವತ್ತರ ಆಸುಪಾಸಿನಲ್ಲಿ ಚಾರಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಬಗ್ಗೆ ಅನುಮಾನ ಆಗಾಗ ಕಾಡುತ್ತಿದ್ದರೂ, ನಮ್ಮೊಂದಿಗೆ 75ರ ವಯಸ್ಸಿನವರೂ ಬರುತ್ತಿದ್ದಾರೆ ಎಂದಾಗ ನನ್ನಲ್ಲೂ ಆತ್ಮವಿಶ್ವಾಸ ಮೂಡಿತು. ಚಾರಣಕ್ಕೆ